೨-೩೦. ಪಿ. ಎಂ.

ಶ್ರೀ ಬಿ. ಬಸವಲಿಂಗಪ್ಪ .—ಮಾನ್ಯ ಸದಸ್ಯರು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲದೇ ಇರತಕ್ಕ ಸಮಯವನ್ನು ಉಪಯೋಗಿಸಿಕೊಂಡು ಕೆಲವು ಮಾತುಗಳನ್ನು ಹೇಳಿದ್ದಾರೆ. ಈ ಮಾತನ್ನು ಸ್ವತ: ಅವರ ಎದುರಿಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಮಾದೇಗೌಡ .—ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ಮುಖ್ಯ ಮಂತ್ರಿಗಳ ಮುಂದೆ ಹೇಳಬೇಕು ಎಂದು ಹೇಳುತ್ತಿದ್ದಾರೆ, ಅದು ಏನು ವಿಚಾರ ನನಗೆ ಅರ್ಥವಾಗಲಿಲ್ಲ. ಇವೊತ್ತು ನಿಮಗೆ ದಾಕ್ಷಿಣ್ಯ ಇದೆ ಆದ್ದರಿಂದ ನೀವು ಹೆದರಿಕೊಳ್ಳಬಹುದು.....

ಅಧ್ಯಕ್ಷರು .—ಈಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಬೊಮ್ಮಾಯಿ ಅವರು ಮಾತನಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ .—ಅಧ್ಯಕ್ಷರೇ, ಈಗ ಬಡ್ಜೆಟ್ ಮಂಡನೆ ಮಾಡಿದ್ದಾಗಿದೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಅದರ ಬಗ್ಗೆ ಮಾತನಾಡಿ, ಅನಂತರ ಈ ಸಣ್ಣ, ಸಣ್ಣ ವಿಷಯ ಗಳನ್ನು ಮಾತನಾಡಬಹುದು.

Gheoroing the Director by the news printers in Bangalore.

ಶ್ರೀ ಎಸ್. ಆರ್. ಬೊಮ್ಮಾಯಿ —ಅಧ್ಯಕ್ಷರೆ, ನಾನು ಈಗ ಒಂದು ಅತ್ಯಾವಶ್ಯಕವಾದಂತಹ ವಿಚಾರವನ್ನು ಹೇಳಲೇಬೇಕಾಗಿದೆ. ಅದೇನೆಂದರೆ ಇವೊತ್ತು ಸಣ್ಣ ಪತ್ರಿಕೆಗಳಿಗೆ ಜಾಹಿರಾತು ಕೊಡುವ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದಾರೆ. ಆ ಹಣವನ್ನು ಡೈರೆಕ್ಟರ್ ಕೊಡುತ್ತಿಲ್ಲ. ಆದ್ದರಿಂದ ಈಗ ಏನಾಗಿದೆ ಅಂದರೆ ಸರ್ಕಾರದ ಆಜ್ಞೆ ಇದ್ದರೂ ಕೊಡದೇ ಇಟ್ಟಿದ್ದಾರೆ. ಈ ವಿಚಾರದಲ್ಲಿ ಎಲ್ಲ ಚಿಕ್ಕ ಪತ್ರಿಕಾಕರ್ತರು ಸಂಬಂಧಪಟ್ಟ ಡೈರೆಕ್ಟರನ್ನು ಘೇರಾವೊ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ವಾರ್ತಾ ಸಚಿವರು ಆಗಲೇ ಇದ್ದರು, ಈಗ ಕಾಣುತ್ತಾ ಇಲ್ಲ, ಆದ್ದರಿಂದ ಕೂಡಲೇ ಈ ಪ್ರಶ್ನೆಯನ್ನು ವಿಚಾರಣೆ ಮಾಡಿ ಅಲ್ಲಿ ಏನು ಘೇರಾವೂ ನಡೆಯದೆ ಅದು ಸಮಾಧಾನಕರವಾಗಿ ಮುಗಿಯುವಂತೆ ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಬಿ. ಬಸವಲಿಂಗಪ್ಪ .—ನಾನು ಹೇಳಿಕಳುಹಿಸುತ್ತೇನೆ.

Non Supply Of Budget- Copies To The Members.

ಶ್ರೀ ಜಿ. ಮಾದೇಗೌಡ .—ಅಧ್ಯಕ್ಷರೇ, ಮಾನ್ಯ ಆರ್ಥ ಸಚಿವರು ನೆನ್ನೆಯ ದಿವಸ ಈ ಸಭೆಯಲ್ಲಿ ಬಡ್ಜೆಟ್ ಮಂಡನೆ ಮಾಡಿದರು.....

ಅಧ್ಯಕ್ಷರು .—ಮಾನ್ಯ ಸದಸ್ಯರು ದಯಮಾಡಿ ಅವರಿಗೆ ಅವಕಾಶ ಕೊಟ್ಟಾಗ ಮಾತನಾಡಬೇಕು.

ಶ್ರೀ ಜಿ. ಮಾದೇಗೌಡ .—ಅಧ್ಯಕ್ಷರೇ, ಬಡ್ಜೆಟ್ ಭಾಷಣ ಪ್ರಾರಂಭ ಮಾಡುವುದಕ್ಕೆ ಮುಂಚೆ ನಮಗೆ ಏನು ಕಷ್ಟ ಇದೆ ಅನ್ನುವುದನ್ನು ಹೇಳುತ್ತಿದ್ದೇನೆ

MR. SPEAKER .—We shall now go to the general discussion on the budget. I request the Hon. The Leader of the Opposition to initiate the discussion.

ಶ್ರೀ ಭೀಮಣ್ಣ ಖಂಡ್ರೆ .—ಅಧ್ಯಕ್ಷರೇ, ನಾನು ಮೇಲೆದ್ದರೆ ಸಸ್ಪೆಂಡ್ ಅನ್ನುತ್ತೀರಾ, ಬೇರೆ ಯವರು ಯಾರು ಮೇಲೆದ್ದರು ಏನೂ ಆಗುವುದಿಲ್ಲ.

ಅಧ್ಯಕ್ಷರು .—ಮಾನ್ಯ ಸದಸ್ಯರು ದಯವಾಡಿ ಕುಳಿತುಕೊಳ್ಳಬೇಕು.